# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **418**

ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀಮತಿ ಬಲ್ಕೀಸ್ ಬಾನು
(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 19.08.2026

ಉತ್ತರಿಸುವ ಸಚಿವರು : ಮಾನ್ಯ ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಶಿವಮೊಗ್ಗ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಒಟ್ಟು ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಕಾರ್ಡ್‌ಗಳ ಸಂಖ್ಯೆ ಎಷ್ಟು; | ಶಿವಮೊಗ್ಗ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ಒಟ್ಟು ಆದ್ಯತಾ (PHH) ಮತ್ತು ಆದ್ಯತೇತರ (NPHH) ಪಡಿತರ ಚೀಟಿಗಳ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ. |
| ಆ | ಈ ಜಿಲ್ಲೆಯಲ್ಲಿ ರದ್ದಾದ/ಪರಿವರ್ತನೆಯಾದ ಬಿ.ಪಿ.ಎಲ್ ಪಡಿತರ ಚೀಟಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಶಿವಮೊಗ್ಗ ಜಿಲ್ಲೆಯಲ್ಲಿ ರದ್ದಾದ/ಪರಿವರ್ತನೆಯಾದ ಆದ್ಯತಾ ಪಡಿತರ ಚೀಟಿಗಳ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-02 ರಲ್ಲಿ ಒದಗಿಸಲಾಗಿದೆ. |
| ಇ | ಯಾವ ಮಾನದಂಡಗಳ ಆಧಾರದ ಮೇಲೆ ಪಡಿತರ ಚೀಟಿಗಳನ್ನು ರದ್ದುಪಡಿಸಲಾಗಿದೆ/ಪರಿವರ್ತನೆ ಮಾಡಲಾಗಿದೆ; | ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿ ಈ ಕೆಳಕಂಡ ವಿಧಗಳಲ್ಲಿ 7,76,206 ಶಂಕಾಸ್ಪದ ಪಡಿತರ ಫಲಾನುಭವಿಗಳನ್ನು ಗುರುತಿಸಲಾಗಿರುತ್ತದೆ.<br>1. CBDT Income Group Annual Income >1,20,000<br>2. GSTN Gross Turnover >25 Lakhs<br>3. MCA Individual as Director<br>4. PDS Duplicate RC Inter State<br>5. PDS Duplicate RC Intra State<br>6. PDS RC Member Above 100 Years<br>7. PDS Silent RC >12 Months<br>8. PDS Silent RC 6-12 Months<br>9. PDS Single Member Below 18 Years<br>10. PM KISAN Land Holding >7.5 Acres<br>11. UIDAI Aadhaar Status Deceased<br>12.Vehicle Ownership value Owning LIGHT MOTOR VEHICLE<br>13. Vehicle Ownership value Owning MEDIUM MOTOR VEHICLE<br>14. Vehicle Ownership value Owning OTHER THAN MENTIONED ABOVE |

| | | |
|---|---|---|
| | | ರಾಜ್ಯದಲ್ಲಿ ಆದ್ಯತಾ ಪಡಿತರ ಚೀಟಿಗಳನ್ನು ಪಡೆಯುವ ಬಗ್ಗೆ ಸರ್ಕಾರವು 2017 ರಲ್ಲಿ ಈ ಕೆಳಕಂಡಂತೆ ಹೊರಗಿಡುವ ಮಾನದಂಡಗಳನ್ನು ರೂಪಿಸಿದೆ.<br>1. ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ ಮಂಡಳಿಗಳು/ ನಿಗಮಗಳು/ ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ ಜಿಎಸ್‌ಟಿ/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.<br>2. ಗ್ರಾಮೀಣ ಪ್ರದೇಶಗಳಲ್ಲಿ 03 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.<br>3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್‌ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.<br>4. ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.<br><br>ಸದರಿ ಮಾನದಂಡಗಳ ಆಧಾರದ ಮೇಲೆ ಅನರ್ಹವೆಂದು ಕಂಡುಬಂದ ಆದ್ಯತಾ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಕ್ರಮವಹಿಸಲಾಗುತ್ತಿದೆ. |
| ಈ | ಹಲವು ಬಡ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿದ್ದರೂ ಸಹ ರದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವರಿಗೆ ಪುನಃ ಬಿ.ಪಿ.ಎಲ್ ಕಾರ್ಡ್‌ಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕೇಂದ್ರ ಸರ್ಕಾರದ ಆದೇಶದಂತೆ ಅನರ್ಹ ಆದ್ಯತಾ ಪಡಿತರ ಚೀಟಿಗಳನ್ನು ಗುರುತಿಸಿ ಆದ್ಯತೇತರ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಈ ರೀತಿ ತಾತ್ಕಾಲಿಕವಾಗಿ ಆದ್ಯತೇತರ ಪಡಿತರ ಚೀಟಿಯನ್ನಾಗಿ (NPHH) ಪರಿವರ್ತಿಸಲಾದ ಪಡಿತರ ಚೀಟಿದಾರರು ಆದ್ಯತಾ ಪಡಿತರ ಚೀಟಿ ಹೊಂದಲು (PHH) ಅರ್ಹರಾಗಿದ್ದಲ್ಲಿ 45 ದಿನದೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರರಿಗೆ ಮನವಿ |

| | | |
|---|---|---|
| | | ಸಲ್ಲಿಸಿದಲ್ಲಿ ಸದರಿ ಮನವಿಯನ್ನು ಪರಿಶೀಲಿಸಿ ಆದ್ಯತಾ ಪಡಿತರ ಚೀಟಿ ಹೊಂದಲು ನಿಯಮಾನುಸಾರ ಅರ್ಹರಿದ್ದಲ್ಲಿ ಅಂತಹವರ ಆದ್ಯತಾ ಪಡಿತರ ಚೀಟಿಯನ್ನು (PHH) ಮರುಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ:ಇ-ಆನಾಸ 159 ಡಿಆರ್ಎ 2025 ದಿನಾಂಕ:30.10.2025 ರಲ್ಲಿ ಆದೇಶಿಸಿದೆ. ಆದರಂತೆ ಒಂದು ವೇಳೆ ಅರ್ಹ ಫಲಾನುಭವಿಯ ಆದ್ಯತಾ ಪಡಿತರ ಚೀಟಿ ರದ್ದು ಪಡಿಸಿದಲ್ಲಿ ಸಂಬಂಧ ಪಟ್ಟ ತಹಶೀಲ್ದಾರ್‌ಗೆ ಮನವಿ ಸಲ್ಲಿಸಬಹುದಾಗಿದೆ. |
| ಉ | ಕಾರ್ಡ್ ವಿತರಣೆ ಸಮಯದಲ್ಲಿ ಬಿ.ಪಿ.ಎಲ್ ಮಾನದಂಡದ ವ್ಯಾಪ್ತಿಗೆ ಇದ್ದು ನಂತರ ಬಿ.ಪಿ.ಎಲ್ ಮಾನದಂಡಕ್ಕೆ ಒಳಪಡದೆ ಇದ್ದಲ್ಲಿ, ಸ್ವ-ಇಚ್ಛೆಯಿಂದ ಕಾರ್ಡ್ ಹಿಂತಿರುಗಿಸಲು ಇರುವ ಆಯ್ಕೆಗಳು ಯಾವುವು; ಇದರ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸ್ವ-ಇಚ್ಛೆಯಿಂದ ಕಾರ್ಡ್ ಹಿಂತಿರುಗಿಸಲು ಯಾವುದೇ ಆಯ್ಕೆಗಳು ಇರುವುದಿಲ್ಲ. |

**ಇ-ಆನಾಸ 253 ಡಿಆರ್ಎ 2026**

(ರಿಜ್ವಾನ್ ಅರ್ಷದ್)
ಆಹಾರ, ನಾಗರಿಕ ಸರಬರಾಜು, ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಸಚಿವರು

ಅನುಬಂಧ - 01

| SHIVAMOGGA DISTRICT REPORT ON TALUKWISE ACTIVE RCs | | | | |
|---|---|---|---|---|
| Taluk Name | AAY RCs | PHH RCs | STATE NPHH RCs | Total RCs |
| BHADRAVATI | 6737 | 67061 | 13191 | 86989 |
| HOSANAGARA | 4001 | 20974 | 10154 | 35129 |
| SAGAR | 4404 | 37982 | 17085 | 59471 |
| SHIKARIPUR | 6277 | 49170 | 11686 | 67133 |
| SHIVAMOGGA | 5542 | 95899 | 42873 | 144314 |
| SORABA | 5559 | 43658 | 9339 | 58556 |
| TIRTHAHALLI | 3504 | 25243 | 15681 | 44428 |
| **TOTAL** | **36024** | **339987** | **120009** | **496020** |

ಉಪ ನಿರ್ದೇಶಕರು
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

LCQ A18

ಅನುಬಂಧ-02

| Shivamogga District PHH to NPHH Converted RCs Report | | | | |
|---|---|---|---|---|
| Sl No | Taluk | Converted RCs | | |
| | | AAY | PHH | Total |
| 1 | Bhadravathi | 264 | 2788 | 3052 |
| 3 | Hosanagar | 141 | 572 | 713 |
| 4 | Sagara | 150 | 1369 | 1519 |
| 5 | Shikaripura | 46 | 946 | 992 |
| 6 | Shivamogga | 246 | 5296 | 5542 |
| 8 | Soraba | 59 | 1049 | 1108 |
| 9 | Thirthahalli | 204 | 1194 | 1398 |
| Total | | 1110 | 13214 | 14324 |

ಉಪ ನಿರ್ದೇಶಕರು

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ

ವ್ಯವಹಾರಗಳ ಇಲಾಖೆ

ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.